ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

**DTE-ADMI0ACM2/42/2025** (E- 1808552)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: **16-06-2025**

**- :: ಸು ತ್ತೋ ಲೆ ::-**

**ವಿಷಯ:** 2025-26ನೇ ಸಾಲಿನಲ್ಲಿ ಖಾಸಗಿ ಪಾಲಿಟೆಕ್ನಿಕ್ ವಿದ್ಯಾರ್ಥಿಗಳ 03ನೇ ಸೆಮಿಸ್ಟರ್, 5ನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಪ್ರವೇಶ, ವರ್ಗಾವಣೆ ಮತ್ತು ಮರು ಪ್ರವೇಶದ ಬಗ್ಗೆ ಸೂಚನೆಗಳು.

**ಉಲ್ಲೇಖ:** **Regulations of Diploma Programme for the Curriculum-2020.**

******

2025-26ನೇ ಸಾಲಿಗೆ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ತೃತೀಯ/ಐದನೇ ಸೆಮಿಸ್ಟರ್ ಡಿಪ್ಲೋಮಾಗೆ ಪ್ರವೇಶ, ಮರುಪ್ರವೇಶ ಮತ್ತು ಪ್ರವೇಶ ಪಡೆದ ನಂತರ ಅನೇಕ ವಿದ್ಯಾರ್ಥಿಗಳು ತಮ್ಮ ವೈಯುಕ್ತಿಕ ತೊಂದರೆಗಳನ್ನು ನಿವೇದಿಸಿಕೊಂಡು ತೃತೀಯ/ಐದನೇ ಸೆಮಿಸ್ಟರ್ ಡಿಪ್ಲೋಮಾಗೆ ವಿವಿಧ ಹಂತದಲ್ಲಿ ವರ್ಗಾವಣೆ ಬಯಸುವ ಅಭ್ಯರ್ಥಿಗಳ ಸಂಬಂಧದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಯನ್ನು ಕೆಳಗೆ ನಮೂದಿಸಲಾಗಿದೆ.

1) ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವರ್ಗಾವಣೆಯನ್ನು ನಿಗಧಿತ ಅವಧಿಯ ಒಳಗೆ ಮುಗಿಸುವ ದೃಷ್ಟಿಯಿಂದ ಕೆಳಗೆ ನಮೂದಿಸಿರುವ ಅವಧಿಯ ಒಳಗೆ ಆಯುಕ್ತಾಲಯಕ್ಕೆ ಸಲ್ಲಿಸಿದ ಪ್ರಕರಣಗಳನ್ನು ಮಾತ್ರ ಪರಿಶೀಲಿಸಿ ಅನುಮೋದನೆ ನೀಡುವ ಬಗ್ಗೆ ಪರಿಗಣಿಸಲಾಗುವುದು.

2) ಈ ಸುತ್ತೋಲೆಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಸ್ಪಷ್ಟ ಮಾಹಿತಿಯನ್ನು ವಿದ್ಯಾರ್ಥಿಗಳಿಂದ ಪಡೆದು, ಸಂಬಂಧಿಸಿದ ಪಾಲಿಟೆಕ್ನಿಕ್ ಪ್ರಿನ್ಸಿಪಾಲರ ಶಿಫಾರಸ್ಸಿನೊಂದಿಗೆ ನಿಗದಿತ ಅವಧಿಯೊಳಗೆ ಆಯುಕ್ತಾಲಯಕ್ಕೆ ಖುದ್ದಾಗಿ ಅರ್ಜಿ ಸಲ್ಲಿಸಬೇಕೆಂದು ತಿಳಿಸಲಾಗಿದೆ. ಬಂದಂತಹ ಅರ್ಜಿಗಳನ್ನು ಪರಿಶೀಲಿಸಿ ವರ್ಗಾವಣೆಯು ಕ್ರಮವಾಗಿದ್ದಲ್ಲಿ, ವರ್ಗಾವಣೆಗೆ ಅನುಮತಿ ನೀಡುವ ಬಗ್ಗೆ ಪರಿಗಣಿಸಲಾಗುವುದು. ಆಯುಕ್ತಾಲಯದಿಂದ ವರ್ಗಾವಣೆ ಆದೇಶ ಬರುವವರೆಗೆ ವಿದ್ಯಾರ್ಥಿಯು ಹಿಂದಿನ ಸಂಸ್ಥೆಯಲ್ಲಿಯೇ ವ್ಯಾಸಂಗ ಮಾಡುತ್ತಿರಬೇಕು. ವರ್ಗಾವಣೆ ಆದೇಶ ಬಂದ ಮೇಲೆ ವಿದ್ಯಾರ್ಥಿಯ ಹಾಜರಾತಿ ಹಾಗೂ ಇತರೆ ಮಾಹಿತಿಯೊಂದಿಗೆ ವಿದ್ಯಾರ್ಥಿಯು ವರ್ಗಾವಣೆ ಹೊಂದಿದ ಸಂಸ್ಥೆಗೆ ವರದಿ ಮಾಡುವುದು.

3) ಈ ಸೂಚನೆಗಳನ್ನು ಎಲ್ಲಾ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಕಡ್ಡಾಯವಾಗಿ ಅನುಸರಿಸಿ ಕೆಳಗೆ ನಮೂದಿಸಿರುವ ಅವಧಿಯೊಳಗೆ ವರ್ಗಾವಣೆ ಪ್ರಕರಣಗಳನ್ನು ಆಯುಕ್ತಾಲಯಕ್ಕೆ ಸಿಬ್ಬಂದಿಗಳ ಮೂಲಕ ಕಳುಹಿಸಿದಲ್ಲಿ ವರ್ಗಾವಣೆ ಬಗ್ಗೆ ಸಕಾಲಿಕ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ. ತಡವಾಗಿ ಬಂದಂತಹ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಪ್ರಕರಣಗಳನ್ನು ಆಯುಕ್ತಾಲಯಕ್ಕೆ ಕಳುಹಿಸಬಾರದೆಂದು ತಿಳಿಸಲಾಗಿದೆ.

ತೃತೀಯ ಸೆಮಿಸ್ಟರ್, ಐದನೇ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳಿಗೆ ಪ್ರವೇಶ, ವರ್ಗಾವಣೆ ಹಾಗೂ 3ನೇ ಸೆಮಿಸ್ಟರ್ ಕೋರ್ಸು ಬದಲಾವಣೆಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ವೇಳಾ ಪಟ್ಟಿ.

| | | |
|---|---|---|
| 01. | ತೃತೀಯ ಸೆಮಿಸ್ಟರ್ ಹಾಗೂ ಐದನೇ ಸೆಮಿಸ್ಟರ್ ಡಿಪ್ಲೋಮಾ ಅಭ್ಯರ್ಥಿಗಳ ಪ್ರವೇಶದ ಅಂತಿಮ ದಿನಾಂಕ | 1. **ದಿನಾಂಕ: 30-06-2025** ರ ಒಳಗೆ ಯಾವುದೇ ದಂಡ ಶುಲ್ಕವಿಲ್ಲದೆ ಪ್ರವೇಶ ನೀಡಬಹುದಾಗಿದೆ.<br>2. **ದಿನಾಂಕ: 10-07-2025** ರ ಒಳಗೆ ರೂ.200/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br>3. **ದಿನಾಂಕ: 21-07-2025** ರ ಒಳಗೆ ರೂ.400/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br><br>ಅಂತಿಮವಾಗಿ **ದಿನಾಂಕ:31-07-2025** ರವರೆಗೆ ರೂ.1,000/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು. |
| 02. | ಪ್ರಥಮ, ತೃತೀಯ ಸೆಮಿಸ್ಟರ್ ಮತ್ತು ಅಂತಿಮ ಸೆಮಿಸ್ಟರ್ ಡಿಪ್ಲೋಮಾ ವ್ಯಾಸಂಗಗಳಿಗೆ ಸೇರ ಬಯಸುವ ರಿಪೀಟರ್ ಅಭ್ಯರ್ಥಿಗಳ ಪ್ರವೇಶದ ಅಂತಿಮ ದಿನಾಂಕ | ರಿಪೀಟರ್ ಪ್ರವೇಶವನ್ನು ರಿಪೀಟರ್ ಕೋಟಾದ ಪ್ರವೇಶ ನಿಯಮಗಳ ಪ್ರಕಾರ ಶೇ. 10ರ ಮಿತಿಯಲ್ಲಿ ಆಯಾ ಕೋರ್ಸಿಗೆ **ದಿನಾಂಕ: 30-06-2025** ರ ಒಳಗೆ ಯಾವುದೇ ದಂಡ ಶುಲ್ಕವಿಲ್ಲದೆ ಪ್ರವೇಶ ನೀಡುವುದು.<br><br>• **ದಿನಾಂಕ: 10-07-2025** ರ ಒಳಗೆ ರೂ.200/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br>• **ದಿನಾಂಕ: 21-07-2025** ರ ಒಳಗೆ ರೂ.400/- ದಂಡ ಶುಲ್ಕದೊಂದಿಗೆ ಪ್ರವೇಶ ನೀಡುವುದು.<br><br>ರಿಪೀಟರ್ ಪ್ರವೇಶದಲ್ಲಿ ಯಾವುದೇ ಕೋರ್ಸ್ ಬದಲಾವಣೆಗೆ ಅವಕಾಶವಿರುವುದಿಲ್ಲ. ಸಿ-20 ಪಠ್ಯಕ್ರಮದಡಿ ಒಬ್ಬ ವಿದ್ಯಾರ್ಥಿಗೆ ರಿಪೀಟರ್ ಆಗಿ ವ್ಯಾಸಂಗ ಮಾಡಲು ಪ್ರತಿ ತರಗತಿಗೆ ಎರಡು ಬಾರಿ ಮಾತ್ರ ಹಾಗೂ ವಿದ್ಯಾರ್ಥಿಯು ಮೊದಲು ಪ್ರವೇಶ ಪಡೆದ ವರ್ಷದಿಂದ ಮೂರು ವರ್ಷದ ಅವಧಿಯೊಳಗೆ ಮಾತ್ರ ರಿಪೀಟರ್ ಆಗಿ ಪ್ರವೇಶ ನೀಡಲು ಅವಕಾಶವಿರುತ್ತದೆ. ರಿಪೀಟರ್ ಪ್ರವೇಶದ ಅನುಮೋದನೆಗೆ ಸಂಬಂಧಿಸಿದಂತೆ **ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು** ಇವರಿಗೆ ಪ್ರತ್ಯೇಕವಾಗಿ ನಿಗಧಿತ ಅವಧಿ ಒಳಗೆ ಪ್ರಸ್ತಾವನೆ ಸಲ್ಲಿಸುವುದು. |
| 03. | ಒಂದು ಖಾಸಗಿ ಪಾಲಿಟೆಕ್ನಿಕ್‌ನಿಂದ ಮತ್ತೊಂದು ಖಾಸಗಿ ಪಾಲಿಟೆಕ್ನಿಕ್‌ಗೆ ಅಥವಾ ಅನುದಾನಿತ ಪಾಲಿಟೆಕ್ನಿಕ್‌ನ | ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿದಂತೆ, ಎರಡೂ ಪಾಲಿಟೆಕ್ನಿಕ್‌ಗಳ ಎನ್‌ಓಸಿ, ಅಭ್ಯರ್ಥಿಯ ಮನವಿ ಹಾಗೂ |

| | | |
|---|---|---|
| | ಅನುದಾನ ರಹಿತ ಕೋರ್ಸುಗಳಿಗೆ ವರ್ಗಾವಣೆ ಕೋರಿದ ತೃತೀಯ ಸೆಮಿಸ್ಟರ್ ಮತ್ತು ಐದನೇ ಸೆಮಿಸ್ಟರ್ ಡಿಪ್ಲೋಮಾ ಅಭ್ಯರ್ಥಿಗಳಿಗೆ ಪ್ರವೇಶ ನೀಡಲು ಅಂತಿಮ ದಿನಾಂಕ.<br>**ಟಿಪ್ಪಣಿ:** ಖಾಸಗಿ ಪಾಲಿಟೆಕ್ನಿಕ್‌ಗಳ ವಿದ್ಯಾರ್ಥಿಗಳಿಗೆ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಅನುದಾನಿತ ಕೋರ್ಸುಗಳ ಸರ್ಕಾರಿ ಕೋಟಾ ಸೀಟುಗಳಿಗೆ ವರ್ಗಾವಣೆ ಮೇರೆಗೆ ಪ್ರವೇಶ ನೀಡಲು ಅವಕಾಶವಿರುವುದಿಲ್ಲ. | ವರ್ಗಾವಣೆ ಶುಲ್ಕಕ್ಕೆ ಸಂಬಂಧಿಸಿದಂತೆ **ದಿ:21-07-2025**ರ **ಒಳಗೆ ಪಾವತಿಸಿರುವ** ಮೂಲ ಚಲನ್ ಅಥವಾ ರಸೀದಿಯೊಂದಿಗೆ ವರ್ಗಾವಣೆ ಮೇರೆಗೆ ಪ್ರವೇಶ ಕೋರುವ ಪಾಲಿಟೆಕ್ನಿಕ್‌ನಿಂದ ಆಯುಕ್ತಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವ ಅಂತಿಮ **ದಿ:31-07-2025**.<br>1) ಅಭ್ಯರ್ಥಿಯ ಮನವಿ<br>2) ಎರಡೂ ಪಾಲಿಟೆಕ್ನಿಕ್‌ಗಳ ನಿರಾಪೇಕ್ಷಣ ಪ್ರಮಾಣ ಪತ್ರ<br>3) ದೃಡೀಕೃತ ಹಿಂದಿನ ಸೆಮಿಸ್ಟರ್‌ಗಳ ಅಂಕಪಟ್ಟಿಗಳ ಪ್ರತಿ.<br>4) **ದಿನಾಂಕ: 21-07-2025** ರ ಒಳಗೆ **ಲೆಕ್ಕಶೀರ್ಷಿಕೆ: 0202-02-101-0-04-POlytechnic**ಗೆ **ಪಾವತಿ ಮಾಡಲಾದ ವರ್ಗಾವಣೆ ಶುಲ್ಕ ರೂ.1,000/-ಕ್ಕೆ ಸಂಬಂಧಿಸಿದಂತೆ ರಸೀದಿ/ಚಲನ್.** |
| 04. | ಡಿಪ್ಲೋಮಾ ನಿಯಮಗಳ ಕಾರ್ಯಕ್ರಮ ಪಠ್ಯಕ್ರಮ ಸಿ–20ರಲ್ಲಿ 2ನೇ ವರ್ಷ/3ನೇ ಸೆಮಿಸ್ಟರ್‌ನಲ್ಲಿ ಡಿಪ್ಲೋಮಾ ಕೋರ್ಸು ಬದಲಾವಣೆಗೆ ಅನುಮತಿ ಸಿರುವುದರಿಂದ ಈ ಕೆಳಕಂಡ ಅಂಶಗಳನ್ನು ಪಾಲಿಸತಕ್ಕದ್ದು.<br>1. 2ನೇ ವರ್ಷ/3ನೇ ಸೆಮಿಸ್ಟರ್‌ನ ಪ್ರೊಗ್ರಾಂ ಬದಲಾವಣೆಗೆ ಬಯಸುವ ಅಭ್ಯರ್ಥಿಯು 1ನೇ ವರ್ಷದ (1 & 2ನೇ ಸೆಮಿಸ್ಟರ್) ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿತಕ್ಕದ್ದು.<br>2.ಅಂತಹ ವಿದ್ಯಾರ್ಥಿಗಳು **ಅನುಬಂಧ-2**ರಲ್ಲಿ ನಮೂದಿರುವ ಸಂಬಂಧಿಸಿದ ಬ್ರಿಡ್ಜ್ ಕೋರ್ಸುಗಳನ್ನು ಅಭ್ಯಸಿಸ ಬೇಕಾಗಿರುತ್ತದೆ.<br>3.ಅಂತಹ ಅಭ್ಯರ್ಥಿಗಳಿಗೆ ಮೆರಿಟ್ ಪ್ರಕಾರ ಪ್ರತಿ ಕೋರ್ಸಿನ ಇಂಟೇಕ್‌ನ ಮಿತಿಯೊಳಗೆ ಸಂಸ್ಥೆಯ ಪ್ರಾಂಶುಪಾಲರ ಹಂತದಲ್ಲಿ ಪ್ರವೇಶ ನೀಡುವುದು. | ವಿದ್ಯಾರ್ಥಿಗಳ ಕೋರ್ಸು ಬದಲಾವಣೆಯ ಪ್ರವೇಶವನ್ನು **ದಿ:10-07-2025** ರ ಒಳಗೆ ನೀಡುವುದು. ಸದರಿ ಪ್ರವೇಶದ ಅನುಮೋದನೆಗೆ ಸಂಬಂಧಿಸಿದಂತೆ **ಕಾರ್ಯದರ್ಶಿಯವರು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಪ್ರತ್ಯೇಕವಾಗಿ ನಿಗಧಿತ ಅವಧಿ ಒಳಗೆ ಪ್ರಸ್ತಾವನೆ ಸಲ್ಲಿಸುವುದು.** |

**ವಿಶೇಷ ಸೂಚನೆ:**

1. ಖಾಸಗಿ ಪಾಲಿಟೆಕ್ನಿಕ್‌ನಿಂದ ಅನುದಾನಿತ ಅಥವಾ ಸರ್ಕಾರಿ ಪಾಲಿಟೆಕ್ನಿಕ್‌ಗೆ ವರ್ಗಾವಣೆ ನೀಡಲು ಅವಕಾಶವಿರುವುದಿಲ್ಲ. ಆದಾಗ್ಯೂ 5ನೇ ಸೆಮಿಸ್ಟರ್ ಖಾಸಗಿ ಪಾಲಿಟೆಕ್ನಿಕ್‌ನಿಂದ ಅನುದಾನಿತ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿ ಕೋಟಾದ ಸ್ಥಾನಗಳಡಿಯಲ್ಲಿ ವರ್ಗಾವಣೆಗೆ ಪರಿಗಣಿಸಬಹುದಾಗಿದೆ.

2. 03 ಮತ್ತು 05ನೇ ಸೆಮಿಸ್ಟರ್‌ಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ನಿಯಮಗಳ ಪ್ರಕಾರ ಅರ್ಹತೆ ಹೊಂದಿರುವುದನ್ನು ಖಚಿತಪಡಿಸಿಕೊಂಡು ಪ್ರವೇಶ ನೀಡತಕ್ಕದ್ದು. 01 ರಿಂದ 02ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ 04 ವಿಷಯಗಳಿಗಿಂತ ಹೆಚ್ಚಿನ

ವಿಷಯಗಳಲ್ಲಿ ಅನುತ್ತೀರ್ಣಗೊಂಡಿದಲ್ಲಿ ಮತ್ತು 01 ರಿಂದ 04ನೇ ಸೆಮಿಸ್ಟರ್ ಪರಿಕ್ಷೆಗಳಲ್ಲಿ 04 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಲ್ಲಿ ಅನುತ್ತೀರ್ಣಗೊಂಡಿದಲ್ಲಿ ಅಂತಹ ವಿದ್ಯಾರ್ಥಿಗಳು 03 & 05ನೇ ಸೆಮಿಸ್ಟರ್ ಪ್ರವೇಶ ಪಡೆಯಲು ಅರ್ಹರಿರುವುದಿಲ್ಲ.

3. ಆಯುಕ್ತಾಲಯದಿಂದ ವರ್ಗಾವಣೆಗೆ ಸಂಬಂಧಿಸಿದಂತೆ ಅನುಮೋದನೆ ಬರುವವರಿಗೆ ಅಭ್ಯರ್ಥಿಯು ಹಿಂದಿನ ಪಾಲಿಟೆಕ್ನಿಕ್‌ನಲ್ಲೇ ವ್ಯಾಸಂಗ ಮಾಡುತ್ತಿರುವ ಷರತ್ತಿಗೆ ಒಳಪಟ್ಟಿರುತ್ತದೆ.

4. ಸಂಖ್ಯಾಧಿಕ ಸೀಟುಗಳ (Supernumerary Seats) ಕೋಟಾದಡಿ (SNQ Quota) ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕೋರ್ಸು ಬದಲಾವಣೆ ಹಾಗೂ ಪಾಲಿಟೆಕ್ನಿಕ್ ವರ್ಗಾವಣೆಗೆ ಅವಕಾಶವಿರುವುದಿಲ್ಲ.

5. 02, 04, 06ನೇ ಸೆಮಿಸ್ಟರ್ ವರ್ಗಾವಣೆಗೆ ಅವಕಾಶವಿರುವುದಿಲ್ಲ.

6. ನಿಗದಿಪಡಿಸಲಾಗಿರುವ ಪ್ರವೇಶ ದಿನಾಂಕವು ಅಂತಿಮವಾಗಿದ್ದು ಪ್ರಿನ್ಸಿಪಾಲರು ಈ ಸಂಗತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತಂದು ಪ್ರವೇಶ ಪ್ರಕ್ರಿಯೆಯನ್ನು ನಿಗದಿಪಡಿಸಲಾದ ದಿನಾಂಕದೊಳಗೆ ಮುಗಿಸತಕ್ಕದ್ದು.

7. ವರ್ಗಾವಣೆ/ ರಿಪೀಟರ್ ಆಗಿ ಪ್ರವೇಶ ನೀಡುವ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ನಿಗದಿಪಡಿಸಲಾದ ಪ್ರವೇಶ ಸಂಖ್ಯೆಯ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ಜರುಗಿಸತಕ್ಕದ್ದು.

8. ಮರುಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಬೋಧನಾ ಶುಲ್ಕವನ್ನು ವಸೂಲಿ ಮಾಡುವುದು.

ಮೇಲ್ಕಂಡ ಮಾರ್ಗಸೂಚಿಗಳನ್ವಯ ನಿಗಧಿತ ಅವಧಿಯ ಒಳಗೆ ಪ್ರವೇಶ ಪ್ರಕ್ರಿಯೆಯನ್ನು ಆಯಾ ಖಾಸಗಿ ಪಾಲಿಟೆಕ್ನಿಕ್ ಪ್ರಾಂಶುಪಾಲರ ಹಂತದಲ್ಲೇ ಮುಗಿಸತಕ್ಕದ್ದು. ವರ್ಗಾವಣೆ ಮೇರೆಗೆ ಪ್ರವೇಶ ಮಾಡಿಕೊಳ್ಳುವ ಎಲ್ಲಾ ಖಾಸಗಿ ಪಾಲಿಟೆಕ್ನಿಕ್ ಪ್ರಾಂಶುಪಾಲರು ಗಮನದಲ್ಲಿಟ್ಟುಕೊಂಡು ಎರಡು ಪಾಲಿಟೆಕ್ನಿಕ್‌ಗಳ ನಿರಾಪೇಕ್ಷಣಾ ಪತ್ರಗಳು(ಎನ್.ಓ.ಸಿ), ಧೃಡೀಕೃತ ಹಿಂದಿನ ತರಗತಿಯ ಅಂಕಪಟ್ಟಿಗಳು ಹಾಗೂ ಸರ್ಕಾರದ ಖಜಾನೆ ಅಥವಾ ಸಮೀಪದ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಪಾವತಿ ಮಾಡಿರುವ ವರ್ಗಾವಣೆ ಶುಲ್ಕದ ಮೂಲ ಪ್ರತಿಗಳನ್ನು ನಿಗಧಿಪಡಿಸಿದ ವೇಳಾಪಟ್ಟಿಯಂತೆ ಆಯುಕ್ತಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ.

Magpiehm

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,

ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ- ಸೂಕ್ತ ಮಾಹಿತಿ ಹಾಗೂ ಅನುಸರಣೆಗಾಗಿ.

**ಕರ್ನಾಟಕ ಸರ್ಕಾರ**

ತಾಂತ್ರಿಕ ಶಿಕ್ಷಣ ಇಲಾಖೆ

ಪಾಲಿಟೆಕ್ನಿಕ್ ಬದಲಾವಣೆಗಾಗಿ ಅರ್ಜಿ 2025–26

(ಖಾಸಗಿ ಪಾಲಿಟೆಕ್ನಿಕ್‌ಗೆ ಸಂಬಂಧಿಸಿದಂತೆ)

(ನಮೂನೆ–1)

(ವಿದ್ಯಾರ್ಥಿ ಭರ್ತಿ ಮಾಡಬೇಕಾದುದು)

1. ವಿದ್ಯಾರ್ಥಿಯ ಹೆಸರು ಮತ್ತು ಪೂರ್ಣ ವಿಳಾಸ ____________________
2. ವಿದ್ಯಾರ್ಥಿಯ ತಂದೆಯ ಹೆಸರು ____________________
3. ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ತರಗತಿ/ಕೋರ್ಸ ಮತು ಪಾಲಿಟೆಕ್ನಿಕ್ ಹೆಸರು ____________________
____________________
4. ಅಭ್ಯರ್ಥಿಯು ಯಾವ ಪಾಲಿಟೆಕ್ನಿಕ್ ಮತ್ತು ತರಗತಿ ಹಾಗೂ ಕೋರ್ಸ್‌ಗೆ ವರ್ಗಾವಣೆ ಕೋರಲಾಗಿದೆ
____________________
5. ಹಿಂದಿನ ಡಿಪ್ಲೋಮಾ ತರಗತಿಯಲ್ಲಿ ವ್ಯಾಸಂಗ ಮಾಡಿದ ವರ್ಷ ಮತ್ತು ನೋಂದಣಿ ಸಂಖ್ಯೆ
____________________
6. ಪಾಲಿಟೆಕ್ನಿಕ್ ವರ್ಗಾವಣೆಗೆ ಸಂಬಂಧಿಸಿದಂತೆ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸುವುದು____________________
____________________

**ಲಗತ್ತಿಸಬೇಕಾದ ಅಡಕಗಳು**

(1) ಹಿಂದಿನ ತರಗತಿಯ ಎಲ್ಲಾ ಸೆಮಿಸ್ಟರ್‌ಗಳ ಅಂಕಪಟ್ಟಿಗಳು

(2) ದಿನಾಂಕ: 21–07–2025 ರ ಒಳಗೆ **0202–02–101–0–04–Polytechnic** ಲೆಕ್ಕಶೀರ್ಷಿಕೆಗೆ ವರ್ಗಾವಣೆ ಶುಲ್ಕ ರೂ. 1,000/- ನ್ನು ಪಾವತಿಸಿರುವ ಬಗ್ಗೆ ಚಲನ್ ಅಥವ ರಸೀದಿ (ಸರ್ಕಾರಿ ಖಜಾನೆ ಅಥವ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಜಮಾ ಮಾಡಿರಬೇಕು)

(3) ಎರಡೂ ಪಾಲಿಟೆಕ್ನಿಕ್‌ಗಳ ಎನ್.ಓ.ಸಿ.

---

**ತಂದೆ/ಪೋಷಕರ ಸಹಿ** **ವಿದ್ಯಾರ್ಥಿಯ ಸಹಿ**

**(ನಮೂನೆ–2)**

**<u>ಅಭ್ಯರ್ಥಿಯು ವ್ಯಾಸಂಗ ಮಾಡುತ್ತಿರುವ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರ ಶಿಫಾರಸ್ಸು</u>**

ಸಂಖ್ಯೆ: ______________________________ ದಿನಾಂಕ:____________________

ಪಾಲಿಟೆಕ್ನಿಕ್‌ನ ಕೋಡ್ ಸಂಖ್ಯೆ:______________________

ವಿದ್ಯಾರ್ಥಿಯು ಒದಗಿಸಿದ ಮಾಹಿತಿಯನ್ನು ಖುದ್ದು ಪರಿಶೀಲಿಸಲಾಗಿದೆ. ಮೇಲ್ಕಂಡ ವಿದ್ಯಾರ್ಥಿಯು ಈ ಪಾಲಿಟೆಕ್ನಿಕ್‌ನಲ್ಲಿ ತೃತೀಯ / ಅಂತಿಮ ಸೆಮಿಸ್ಟರ್ ಡಿಪ್ಲೋಮಾ ತರಗತಿಗೆ ನಿಗಧಿತ ಅವಧಿಯೊಳಗೆ ಪ್ರವೇಶ ಪಡೆದಿದ್ದು, ಪ್ರಸ್ತುತ ಬೇರೊಂದು ಪಾಲಿಟೆಕ್ನಿಕ್‌ನಲ್ಲಿ ವ್ಯಾಸಂಗ ಮುಂದುವರೆಸಲು ಕೋರಿರುವುದನ್ನು ವಿದ್ಯಾರ್ಥಿಯು ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ ವಿದ್ಯಾರ್ಥಿಯ ವರ್ಗಾವಣೆಗೆ ಈ ಪಾಲಿಟೆಕ್ನಿಕ್‌ನ ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ಮತ್ತು ನಿಯಮಗಳ ಪ್ರಕಾರ ವಿದ್ಯಾರ್ಥಿಯು ವರ್ಗಾವಣೆಗೆ ಅರ್ಹರಿರುವರೆಂದು ಧೃಡೀಕರಿಸಲಾಗಿದೆ ಹಾಗೂ ಅಭ್ಯರ್ಥಿಯ ಕೋರಿಕೆಯಂತೆ ಪಾಲಿಟೆಕ್ನಿಕ್ ಬದಲಾವಣೆಗೆ ಶಿಫಾರಸ್ಸು ಮಾಡಲಾಗಿದೆ. ವ್ಯಾಸಂಗದ ಅವಧಿಯಲ್ಲಿ ಅಭ್ಯರ್ಥಿಯ ಗುಣ ಮತ್ತು ನಡತೆಯು ಸಮರ್ಪಕವಾಗಿತ್ತು ಎಂದು ಧೃಡೀಕರಿಸಲಾಗಿದೆ. ವಿವರವನ್ನು ಕೆಳಗೆ ನಮೂದಿಸಲಾಗಿದೆ.

1) ಅಭ್ಯರ್ಥಿಯ ಹೆಸರು: ____________________
2) ಪ್ರವೇಶ ಪಡೆದ ವರ್ಷ/ತರಗತಿ/ಕೋರ್ಸ್/ನೋದಣಿ ಸಂಖ್ಯೆ: ____________________
3) ನಿರ್ದೇಶನಾಲಯದಿಂದ ಪ್ರವೇಶಾನುಮೋದನೆ ಪಡೆದಿರುವ ಬಗ್ಗೆ ದಾಖಲೆಯ ಸಂಖ್ಯೆ __________

ಸ್ಥಳ : ಪ್ರಿನ್ಸಿಪಾಲರ ಸಹಿ ಮತ್ತು ಮೊಹರು

ದಿನಾಂಕ :

**<u>ವರ್ಗಾವಣೆ ಮೇರೆಗೆ ಪ್ರವೇಶ ಮಾಡಿಕೊಳ್ಳುವ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರ ಶಿಫಾರಸ್ಸು</u>**

ಸಂಖ್ಯೆ: ______________________________ ದಿನಾಂಕ: ____________________

ಪಾಲಿಟೆಕ್ನಿಕ್‌ನ ಕೋಡ್ ಸಂಖ್ಯೆ: ____________________

ಅಭ್ಯರ್ಥಿಯ ಮೇಲ್ಕಂಡ ದಾಖಲೆಗಳನ್ನು ಪರಿಶೀಲಿಸಲಾಗಿದೆ. ವಿದ್ಯಾರ್ಥಿಯು ತೆಗೆದುಕೊಳ್ಳಲು ಬಯಸಿದ ಕೋರ್ಸ್ ಈ ಪಾಲಿಟೆಕ್ನಿಕ್‌ನಲ್ಲಿ ಭೋದಿಸಲಾಗುತ್ತಿದ್ದು, ಪ್ರಸ್ತುತ ಈ ಕೋರ್ಸ್‌ನ ತೃತೀಯ / ಅಂತಿಮ ಸೆಮಿಸ್ಟರ್ ಡಿಪ್ಲೋಮಾದಲ್ಲಿ **<u>ಇಂಟೇಕ್ ಮಿತಿಯೊಳಗೆ ಸ್ಥಾನ ಖಾಲಿ ಇರುವುದನ್ನು ಗಣನೆಗೆ ತೆಗದುಕೊಂಡು</u>** ಮೇಲ್ಕಂಡ ಅಭ್ಯರ್ಥಿಗೆ ಕೆಳಕಂಡಂತೆ ವರ್ಗಾವಣೆ ಮೇರೆಗೆ ದಿನಾಂಕ: ____________________ ರಂದು ಪ್ರವೇಶ ನೀಡಲಾಗಿದೆ.

1) ಅಭ್ಯರ್ಥಿಯ ಹೆಸರು: ____________________
2) ವರ್ಗಾವಣೆ ಮೇರೆಗೆ ಪ್ರವೇಶ ನೀಡಿರುವ ತರಗತಿ ಹಾಗೂ ಕೋರ್ಸ್/ನೋದಣಿ ಸಂಖ್ಯೆ:______________ ______________________________________________

ಸ್ಥಳ : ಪ್ರಿನ್ಸಿಪಾಲರ ಸಹಿ ಮತ್ತು ಮೊಹರು

ದಿನಾಂಕ :

**<u>ಪ್ರತಿ:–</u>**

ಪ್ರಿನ್ಸಿಪಾಲರು,

____________________

____________________

____________________